ಮಲ್ಲಿಕಾರ್ಜುನ ಹ.ಬಗಲಿ, ಜತ್ತ

◆ ಬೆಳಿಗ್ಗೆ ಬೇಗ ಎದ್ದರೆ ಆರೋಗ್ಯಕ್ಕೆ ಒಳ್ಳೆಯದಂತೆ. ಆದರೆ ನಸುಕಿನಲ್ಲೇಳುವ ಹುಂಜ ಬೇಗ ಬಲಿಯಾಗುವುದಲ್ಲ?



ಗಾದೆ ನಿಜವಾಯಿತಲ್ಲ! ಹುಂಜ ಸಾಯುವವರೆಗೆ ಆರೋಗ್ಯದಿಂದಿತ್ತು!

ಎಂ.ಎ. ಕುಮಾರ್, ಬೆಂಗಳೂರು

◆ ದೆವ್ವ ಸ್ಮಶಾನದಲ್ಲಿ ಮಾತ್ರ ಏಕೆ ಇರುತ್ತದೆ?

ಮೋಹಿನಿಯೂ ಅಲ್ಲೇ ಇರುತ್ತಾಳಲ್ಲ; ದೆವ್ವವಾದರೂ ಹೆಣ್ಣನ್ನು ಫಾಲೋ ಮಾಡುವ ಬುದ್ಧಿ ಹೋಗಿಲ್ಲ!

ಎಸ್.ಎನ್. ಮಹಾಬಲರಾವ್, ಎನ್ಆರ್‌ಪುರ

◆ ರತಿಯಂತಹ ಹೆಂಡತಿ ಇದ್ದರೂ ಜಿಲೇಬಿ ಏಕೆ?

ಕರಟ ಹಿಡಿಯುವುದಕ್ಕೊಂದು ದಾರಿ ಬೇಕಲ್ಲ, ಅದಕ್ಕೇ.

ಎಂ.ಕೆ. ರವಿಕಾಂತ, ತುಮಕೂರು

◆ ತಂತ್ರಜ್ಞಾನ ಇಲ್ಲದ ಆ ದಿನಗಳಲ್ಲಿ ಎಲ್ಲರಲ್ಲೂ ಮಾನವೀಯತೆ ಚೆಂದ ಇತ್ತು. ಆದರೆ ಇಂದು ಏನಾಗಿದೆ?



ಮಡಿಕೇರಿಯಲ್ಲಿ ಭೂಕುಸಿತವಾದಾಗ ಮಾನವೀಯತೆ ಕಂಡಿತಲ್ಲ! ವಿಪತ್ತು ವಿವೇಕದ ಕರೆಗಂಟೆ.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ

◆ ಇಲ್ಲೊಬ್ಬ ಹುಡುಗಿ ತನ್ನ ತಾಯಿಗೆ ಮಾತುಮಾತಿಗೆ 'ಅಮ್ಮ, ನಿನಗೆ ಡೈವರ್ಸ್ ಕೊಡುತ್ತೇನೆ' ಎನ್ನುವಳಲ್ಲಾ...?

ಅದಾ! ತಾಯಿ ತಲೆಗೆ ಡೈ(ಬಣ್ಣ) ಹಚ್ಚಿಕೊಂಡಾಗ ಚರ್ಮಕ್ಕೆ ಅಂಟಿದ್ದನ್ನು ಒರೆಸಿಕೊಡ್ತೀನಿ ಅಂತಿದ್ದಾಳಷ್ಟೆ.

ವಿ. ಹೇಮಂತಕುಮಾರ್, ಬೆಂಗಳೂರು

◆ ಸಂಬಳ ತರುವ ಗಂಡನಿಗೂ ಹೆಂಡತಿಯೇ ಬಾಸ್ ಆಗಿರುತ್ತಾಳಲ್ಲವೇ?

'ಫೆಚ್' ಎಂದಾಕ್ಷಣ ಚೆಂಡನ್ನು ತರುವ ನಾಯಿ ಕ್ರಿಕೆಟ್ ಟೀಂ ಕ್ಯಾಪ್ಟನ್ ಆದೀತೆ? ಇದೂ ಹಾಗೆಯೇ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

◆ ಸುಳ್ಳು ಹೇಳಿದರೆ ಕಠಿಣ ಶಿಕ್ಷೆ ಅಂತ ಸರ್ಕಾರ ಕಾನೂನು ಮಾಡಿದರೆ?

ಜನ ಕಪ್ಪು ಕೋಟು ಹಾಕಿ ಉಗ್ರ ಪ್ರತಿಭಟನೆ ಕೈಗೊಳ್ಳುವರಂತೆ.

ಟಿ.ಎಂ. ಮಾನಪ್ಪ, ಶಿವಮೊಗ್ಗ

◆ ಕೈ ಕೆಸರು ಮಾಡಿಕೊಳ್ಳದೆ ಬಾಯಿ ಮೊಸರು ಮಾಡಿಕೊಳ್ಳುವವರು ಯಾರು?

ಮೊಸರಿನ ಪಾತ್ರೆಯಲ್ಲಿ ಬೀಳುವ ಕೈಯೇ ಇಲ್ಲದ ಹುಳುಗಳು.

ಕೆ.ವಿ. ಶಿವಕುಮಾರ್ ಕಾಳೀಹುಂಡಿ, ಮೈಸೂರು

◆ ವಾಟ್ಸ್ಯಾಪ್ ಮೆಸೇಜ್ ಓದುವುದಕ್ಕೆ ಟೈಂ ಸಿಗುತ್ತಿಲ್ಲ ಅಂತಾಳಲ್ಲಾ... ಸಲಹೆ ಪ್ಲೀಸ್...?

ಮೆಸೇಜಲ್ಲಿ ಆಗಾಗ್ಗೆ ಅವಳದೊಂದು ಫೋಟೊ ಕಳಿಸಲಾರಂಭಿಸಿ. ತಪ್ಪದೆ ಎಲ್ಲವನ್ನೂ ನೋಡುತ್ತಾಳೆ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

◆ ಸುರಿಯುವ ಮಳೆಗೂ, ಹರಿಯುವ ಕಣ್ಣೀರಿಗೂ ಸಾಮ್ಯತೆ ಏನು?

ಎರಡೂ ಹಗುರಾಗಿಸುವವೇ. ಮೋಡದ ಭಾರ ಕಳೆಯಲು ಮಳೆ, ಮನಸ್ಸಿನ ಭಾರ ಕಳೆಯಲು ಅಳು.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

◆ ದೊಡ್ಡವರ ಮನಸ್ಸು ಸಹ ಮಕ್ಕಳ ಮನಸ್ಸಿನಂತೆ ಇದ್ದರೆ ಹೇಗಿರುತ್ತೆ ಸಾರ್?

ಮೆಂಟಲಿ ರಿಟಾರ್ಡೆಡ್ ಎಂದು ಆಸ್ಪತ್ರೆಗೆ ಸೇರಿಸಬೇಕಾಗುತ್ತೆ.

ರವಿ. ಎಂ. ಪೈ, ಹೊನ್ನಾವರ

◆ ಕನ್ಯೆಯರೆಲ್ಲ ಒಳ್ಳೆಯವರೇ. ಆದರೆ ಕೆಟ್ಟ ಹೆಂಡತಿಯರು ಎಲ್ಲಿ ರೂಪುಗೊಂಡರು?

ಎಲ್ಲ ಒಳ್ಳೆಯ ಅಮ್ಮಂದಿರು ಎಲ್ಲಿ ಕೆಟ್ಟ ಅತ್ತೆಯರಾಗಿ ರೂಪುಗೊಂಡರೋ ಅಲ್ಲೇ.

## ಬಹುಮಾನಿತ ಪ್ರಶ್ನೆ

ಎಚ್.ಆರ್. ಪ್ರಕಾಶ್, ಹೊಸನಗರ

◆ ಈ ಯುಗದಲ್ಲಿ ದೇವರು ಪ್ರತ್ಯಕ್ಷನಾದರೆ ಹುಡುಗಿಯರು ಏನು ವರ ಕೇಳಬಹುದು?

'ಫೇಸ್‌ಬುಕ್ ಅಪ್‌ಡೇಟ್ ಮಾಡಲು ಬೊಂಬಾಟಾಗಿರೋ ಸೆಲ್ಫೀಗೆ ಫೋಸ್ ಕೊಡು' ಎಂದು ಕೇಳಬಹುದು.

ಜಿ. ಪ್ರದೀಪಕುಮಾರ, ಹೂವಿನಹಡಗಲಿ

◆ ಪುರುಷಪುರುಷ; ಸ್ತ್ರೀಸ್ತ್ರೀ; ಸ್ತ್ರೀಪುರುಷ ಈ ಮೂರು ಜೋಡಿ ಸಹೋದ್ಯೋಗಿಗಳಲ್ಲಿ ಯಾರಲ್ಲಿ ಹೊಂದಾಣಿಕೆ ಹೆಚ್ಚು?

ಮೂರರಲ್ಲೂ ಹೆಚ್ಚೇ. ಮೊದಲನೆಯದು ಬಾರ್‌ನಲ್ಲಿ, ಎರಡನೆಯದು ಮಾಲ್‌ನಲ್ಲಿ, ಮೂರನೆಯದು ಪಾರ್ಕ್‌ನಲ್ಲಿ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

◆ ಫ್ಲೆಕ್ಸ್ ಬೋರ್ಡ್‌ಗಳನ್ನು ದೇಶಾದ್ಯಂತ ನಿಷೇಧಿಸಿದರೆ ರಾಜಕಾರಣಿಗಳಿಗೆ ತೊಂದರೆ ಆಗುತ್ತದೆಯೆ?

ಫ್ಲೆಕ್ಸ್‌ಬೋರ್ಡ್ ವ್ಯಾಪಾರಸ್ಥರಿಗೆ ನಷ್ಟವಷ್ಟೆ. ಕೊಳಕರು ಹೇಗಾದರೂ ದುರ್ನಾತ ಹರಡಬಲ್ಲರು.

ದೇವೇಂದ್ರ, ಕಡೂರು

◆ ವಾಸ್ತವತೆಯ ಅರಿವು ಇಲ್ಲದವರು ಹೆಚ್ಚು ವಾದಿಸುವುದಂತೆ. ಹೌದೇ?




ಅಲ್ಲ. ಟಿಆರ್‌ಪಿಯ ಅರಿವು ಇರುವವರು ಹೆಚ್ಚು ವಾದಿಸುತ್ತಾರೆ.

ಕೆ.ಎಂ. ವಿಭೂತಿ, ಹರಿಹರ

◆ ಸ್ತ್ರೀ ಹಾಗೂ ಇಸ್ತ್ರೀ ನಡುವಿನ ಅಂತರವೇನು?

ಇಸ್ತ್ರೀ ಗರಂ ಆದರೆ ಬಟ್ಟೆ ತೂತು. ಸ್ತ್ರೀ ಗರಂ ಆದರೆ ಸಂಸಾರವೇ ಥೂ ಥೂ!

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

◆ ಭಟ್ಟರಿಗೂ, ಭಟರಿಗೂ ಏನು ವ್ಯತ್ಯಾಸ?

ಭಟರು ತಪ್ಪೆಸಗಿದರೆ ಹಾಹಾಕಾರ. ಭಟ್ಟರು ತಪ್ಪೆಸಗಿದರೆ ಹಾ! ಹಾ! ಖಾರ!

■ ರಾಮ್